# ಕುವೆಂಪು ವಿಶ್ವವಿದ್ಯಾನಿಲಯ

ಕುವಿ:ಪವಿ:ಘಟಿ:20: 10406 :2009

ಕುಲಸಚಿವ (ಪರೀಕ್ಷಾಂಗ) ರವರ ಕಛೇರಿ,
ಜ್ಞಾನ ಸಹ್ಯಾದ್ರಿ, ಶಂಕರಘಟ್ಟ-577 451
ದಿನಾಂಕ: 11.11.2009

## ಪ್ರಕಟಣೆ

ವಿಷಯ: 20ನೇ ಘಟಿಕೋತ್ಸವದ ಕುರಿತು.

★ ★ ★

ಕುವೆಂಪು ವಿಶ್ವವಿದ್ಯಾನಿಲಯದ ಇಪ್ಪತ್ತನೇ ವಾರ್ಷಿಕ ಘಟಿಕೋತ್ಸವ ಸಮಾರಂಭವು 2010ನೇ ಇಸವಿಯ ಜನವರಿ ಮಾಹೆಯ ಕೊನೆಯ ವಾರದಲ್ಲಿ ಅಥವ ಫೆಬ್ರವರಿ ಮಾಹೆಯ ಮೊದಲನೆಯ ವಾರದಲ್ಲಿ ಜರುಗಲಿದ್ದು, ಜುಲೈ 2009 ರವರೆಗೆ (ರೆಗ್ಯುಲರ್ ಮತ್ತು ದೂರಶಿಕ್ಷಣ) ನಡೆದ ವಿವಿಧ ಪಿ.ಹೆಚ್.ಡಿ / ಎಂ.ಫಿಲ್/ ಎಂ.ಎಸ್ಸಿ ( ಇಂಜಿ) ಬೈ ರೀಸರ್ಚ್/ ಸ್ನಾತಕೋತ್ತರ ಪದವಿ/ ಸ್ನಾತಕ ಪದವಿ/ ಸ್ನಾತಕೋತ್ತರ ಡಿಪ್ಲೊಮಾ ಪದವಿ/ ಸ್ನಾತಕ ಡಿಪ್ಲೊಮ/ ಸರ್ಟಿಫಿಕೇಟ್ ಕೋರ್ಸ್‌ಗಳ ಅಂತಿಮ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳಿಂದ ಪದವಿ/ರ್‍ಯಾಂಕ್/ನಗದು ಬಹುಮಾನ, ಪ್ರಮಾಣ ಪತ್ರಗಳನ್ನು ಪಡೆಯಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಎಲ್ಲಾ ಪದವಿಗಳಲ್ಲಿ ಪ್ರಥಮ ರ್‍ಯಾಂಕ್ ಪಡೆದವರಿಗೆ, ಚಿನ್ನದ ಪದಕ ಹಾಗೂ ನಗದು ಬಹುಮಾನ ವಿಜೇತರಿಗೆ ಮಾತ್ರ ವೇದಿಕೆಯ ಮೇಲೆ ಪದಕ, ಬಹುಮಾನ ಹಾಗೂ ಪ್ರಮಾಣ ಪತ್ರಗಳನ್ನು ಪ್ರದಾನ ಮಾಡಲಾಗುವುದು.

ಎಲ್ಲಾ ಸ್ನಾತಕೋತ್ತರ ಪದವೀಧರರಿಗೆ, ಇತರೆ ರ್‍ಯಾಂಕ್ ವಿಜೇತರಿಗೆ ಪದವಿ ಹಾಗೂ ರ್‍ಯಾಂಕ್ ಪ್ರಮಾಣ ಪತ್ರಗಳನ್ನು ಘಟಿಕೋತ್ಸವದ ದಿನವೇ **ಖುದ್ದಾಗಿ** ಘಟಿಕೋತ್ಸವ ಕಛೇರಿಯಲ್ಲಿ ವಿತರಿಸಲಾಗುವುದು.

ಇತರೆ ಸ್ನಾತಕ ಪದವೀಧರರ (ರ್‍ಯಾಂಕ್ ವಿಜೇತರನ್ನು ಹೊರತುಪಡಿಸಿ) ಪದವಿ ಪ್ರಮಾಣ ಪತ್ರಗಳನ್ನು ಘಟಿಕೋತ್ಸವದ ನಂತರ, ಅವರು ವಿದ್ಯಾಭ್ಯಾಸ ಮಾಡಿದ ಕಾಲೇಜು / ಸಂಸ್ಥೆ/ ದೂರ ಶಿಕ್ಷಣ ಅಧ್ಯಯನ ಕೇಂದ್ರಗಳಿಗೆ ಕಳುಹಿಸಿ ಕೊಡಲಾಗುವುದು. ಅರ್ಹ ಅಭ್ಯರ್ಥಿಗಳು ಆಯಾ ಕಾಲೇಜು/ ಸಂಸ್ಥೆ/ ದೂರ ಶಿಕ್ಷಣ ಅಧ್ಯಯನ ಕೇಂದ್ರಗಳಿಂದ ಪದವಿ ಪ್ರಮಾಣ ಪತ್ರಗಳನ್ನು ಪಡೆಯಲು ಕೋರಲಾಗಿದೆ.

**ಅರ್ಜಿ ಸಲ್ಲಿಸಲು ಕಡೆಯ ದಿನಾಂಕ : 15-12-2009**

**ವಿಳಂಬ ಶುಲ್ಕ ರೂ. 100 ರೊಂದಿಗೆ ಅರ್ಜಿ ಸಲ್ಲಿಸಲು ಕಡೆಯ ದಿನಾಂಕ: 31-12-2009**

**ವಿವಿಧ ಗುಂಪಿನ ಅಭ್ಯರ್ಥಿಗಳು ಪಾವತಿಸಬೇಕಾದ ಶುಲ್ಕದ ವಿವರಗಳು ಈ ಕೆಳಗಿನಂತಿದೆ:-**

| ಕ್ರಸಂ | ವಿವರ | ಅಭ್ಯರ್ಥಿಗಳು | | | | |
|---|---|---|---|---|---|---|
| | | ವೃತ್ತಿಪರ/ವೃತ್ತಿಪರವಲ್ಲದ ಪದವಿಗಳು | | ಪಿಹೆಚ್‌ಡಿ/ಎಂಫಿಲ್/ಎಂಎಸ್ಸಿ(ತಾಂತ್ರಿಕ)/ಡಿಲಿಟ್/ಡಿಎಸ್ಸಿ | | ಎನ್‌ಆರ್‌ಐ |
| | | ಸಾಮಾನ್ಯ | ಎಸ್.ಸಿ/ಎಸ್‌ಟಿ | ಸಾಮಾನ್ಯ | ಎಸ್.ಸಿ/ಎಸ್‌ಟಿ | |
| 1 | ಪ್ರಮಾಣ ಪತ್ರ ಶುಲ್ಕ(ಅರ್ಜಿ ಶುಲ್ಕ ಒಳಗೊಂಡಂತೆ) | ರೂ. 446=00 | ರೂ. 378=00 | ರೂ.1140=00 | ರೂ. 1000=00 | ರೂ.2363=00 |

**ಪು. ತಿ. ನೋ**

**ಅಭ್ಯರ್ಥಿಗಳಿಗೆ ಸೂಚನೆಗಳು**:-

1. 20ನೇ ಘಟಿಕೋತ್ಸವ ನಡೆಯುವ ದಿನಾಂಕ, ಸಮಯ ಮತ್ತು ಸ್ಥಳದ ಬಗ್ಗೆ ಎಲ್ಲಾ ಕಾಲೇಜುಗಳಲ್ಲಿ, ಸ್ನಾತಕೋತ್ತರ ಕೇಂದ್ರಗಳಲ್ಲಿ, ದೂರ ಶಿಕ್ಷಣ ಅಧ್ಯಯನ ಕೇಂದ್ರಗಳಲ್ಲಿ ಹಾಗೂ ವೃತ್ತ ಪತ್ರಿಕೆಗಳಲ್ಲಿ ಹಾಗೂ ವಿಶ್ವವಿದ್ಯಾನಿಲಯದ ವೆಬ್ ಸೈಟ್‌ನಲ್ಲಿ ಪ್ರಕಟಿಸುವ ಮೂಲಕ ತಿಳಿಸಲಾಗುವುದು.
2. ಅಭ್ಯರ್ಥಿಗಳು **ಖುದ್ದಾಗಿ** ಅಥವಾ ಸ್ವಯಂ ವಿಳಾಸವಿರುವ 10' X 4' ಅಳತೆಯ ಲಕೋಟೆಗೆ ರೂ.5-00ರ ಅಂಚೆ ಸ್ಟ್ಯಾಂಪ್ ಅಂಟಿಸಿ ಕಳುಹಿಸಿ ಅಂಚೆಯ ಮೂಲಕ **ಅವರು ವ್ಯಾಸಂಗ ಮಾಡಿದ ಕಾಲೇಜು : ಸ್ನಾತಕೋತ್ತರ ಕೇಂದ್ರ ಹಾಗೂ ದೂರ ಶಿಕ್ಷಣ ಅಧ್ಯಯನ ಕೇಂದ್ರಗಳಿಂದ ಅರ್ಜಿಗಳನ್ನು** ಪಡೆದುಕೊಳ್ಳಬಹುದಾಗಿದೆ.
3. **ರ್‍ಯಾಂಕ್ ವಿಜೇತರು** ಅರ್ಜಿಗಳನ್ನು ಸ್ವಯಂ ವಿಳಾಸವಿರುವ 10' X 4' ಅಳತೆಯ ಲಕೋಟೆಗೆ ರೂ. 5=00 ಅಂಚೆ ಸ್ಟ್ಯಾಂಪ್ ಅಂಟಿಸಿ ಕಳುಹಿಸಿ ಅಂಚೆಯ ಮೂಲಕ **ಕುಲಸಚಿವ (ಪರೀಕ್ಷಾಂಗ) ಇವರಿಂದ ಪಡೆದುಕೊಳ್ಳಬೇಕು**.
4. ಅರ್ಜಿಯನ್ನು ಸಲ್ಲಿಸುವ ಲಕೋಟೆಯ ಮೇಲೆ **"20ನೇ ಘಟಿಕೋತ್ಸವಕ್ಕಾಗಿ ಅರ್ಜಿ"** ಎಂದು ಬರೆಯಬೇಕು.
5. ಪದವಿ, ರ್‍ಯಾಂಕ್ ಅರ್ಜಿಗಳ ನಮೂನೆಗಳನ್ನು ವೆಬ್‌ಸೈಟ್ www.kuvempu.ac.in ನಲ್ಲಿ ಕೂಡ ಪಡೆಯಬಹುದಾಗಿದೆ.
6. ಅರ್ಜಿಯನ್ನು ಪ್ರತ್ಯೇಕವಾಗಿ ಹಣ ಪಾವತಿಸಿ ಪಡೆಯಬೇಕಾಗಿಲ್ಲ. ಮೇಲೆ ಹೇಳಿದ ಮೊತ್ತವು ಅರ್ಜಿ ಶುಲ್ಕವನ್ನು ಒಳಗೊಂಡಿರುತ್ತದೆ.
7. ಈ ಹಿಂದಿನ ವರ್ಷಗಳಲ್ಲಿ ತೇರ್ಗಡೆಯಾಗಿ ಪದವಿ ಪ್ರಮಾಣ ಪತ್ರವನ್ನು ಪಡೆಯದವರು ಪ್ರತಿ ವರ್ಷಕ್ಕೆ ರೂ. 50=00 ರಂತೆ ಶೋಧನಾ ಶುಲ್ಕ (ಸರ್ಚ್ ಫೀ) ಹೆಚ್ಚುವರಿಯಾಗಿ ಪಾವತಿಸಬೇಕು.
8. ಅ) ಪಾವತಿಸಬೇಕಾದ ಒಟ್ಟು ಶುಲ್ಕವನ್ನು **"ಡಿಮ್ಯಾಂಡ್ ಡ್ರಾಫ್ಟ್"** ಮೂಲಕ **"ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾನಿಲಯ"** ಇವರಿಗೆ **ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಬಿ. ಆರ್ ಪ್ರಾಜೆಕ್ಟ್‌ಗೆ** ಪಾವತಿಯಾಗುವಂತೆ ಪಡೆಯಬೇಕು. ಇತರೆ ಬ್ಯಾಂಕ್ ಮೇಲೆ ಪಡೆದ ಡಿಡಿಗಳನ್ನು ಸ್ವೀಕರಿಸಲಾಗುವುದಿಲ್ಲ. ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

   ಆ) ಈಗಾಗಲೇ ಘಟಿಕೋತ್ಸವ ಶುಲ್ಕವನ್ನು ಪಾವತಿ ಮಾಡಿರುವ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿದ ಅರ್ಜಿಯನ್ನು ಲಗತ್ತುಗಳೊಂದಿಗೆ ಸಲ್ಲಿಸಬೇಕು. ಶುಲ್ಕ ಪಾವತಿಸಿದ ಬಗ್ಗೆ ದಾಖಲೆ ಲಗತ್ತಿಸುವುದು.
9. ಶುಲ್ಕವನ್ನು ನಗದು : ಪೋಸ್ಟಲ್ ಆರ್ಡರ್ : ಚೆಕ್ ಇತ್ಯಾದಿಗಳ ಮೂಲಕ ಸ್ವೀಕರಿಸಲಾಗುವುದಿಲ್ಲ. ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು **ದೃಢೀಕರಿಸಿದ ಜಾತಿ ಪ್ರಮಾಣ ಪತ್ರವನ್ನು** ಪದವಿ ಪ್ರಮಾಣ ಪತ್ರಕ್ಕಾಗಿ ಸಲ್ಲಿಸುವ ಅರ್ಜಿಯ ಜೊತೆ ಲಗತ್ತಿಸಬೇಕು. (ಇತರೆ ಪ್ರಮಾಣ ಪತ್ರಗಳಿಗೆ ಇದರ ಅಗತ್ಯವಿರುವುದಿಲ್ಲ)
10. ಇತರೆ ವಿವರಗಳನ್ನು ನಿಗದಿತ ಅರ್ಜಿ ನಮೂನೆಯಲ್ಲಿ ಕೊಡಲಾಗಿದೆ.
11. ಭರ್ತಿ ಮಾಡಿದ ಅರ್ಜಿಯನ್ನು ಡಿ. ಡಿ. ಹಾಗೂ ದೃಢೀಕರಿಸಿದ ಅಂಕಪಟ್ಟಿ ನಕಲುಗಳೊಂದಿಗೆ (ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಾದಲ್ಲಿ ದೃಢೀಕೃತ ಜಾತಿ ಪ್ರಮಾಣ ಪತ್ರ ಸಹ ಲಗತ್ತಿಸಬೇಕು) ದಿನಾಂಕ: 15-12-2009ರೊಳಗಾಗಿ ಈ ಕೆಳಗಿನ ವಿಳಾಸಕ್ಕೆ ಕಳುಹಿಸತಕ್ಕದ್ದು. ವಿಳಂಬ ಶುಲ್ಕದೊಂದಿಗೆ ಸಲ್ಲಿಸಲು ಕಡೆಯ ದಿನಾಂಕ: 31-12-2009

**ಕುಲಸಚಿವರು (ಪರೀಕ್ಷಾಂಗ),**
**ಕುವೆಂಪು ವಿಶ್ವವಿದ್ಯಾನಿಲಯ,**
**ಪರೀಕ್ಷಾಂಗ ವಿಭಾಗ,**
**ಜ್ಞಾನ ಸಹ್ಯಾದ್ರಿ, ಶಂಕರಘಟ್ಟ-577 451.**

ಆದೇಶದ ಮೇರೆಗೆ,

ಸಹಿ

(ಡಾ. ಎ. ರಾಮೇಗೌಡ)
ಕುಲಸಚಿವ (ಪರೀಕ್ಷಾಂಗ)